MYSORE LEGISLATIVE ASSEMBLY.

FIFTH DAY.

Saturday, 23rd March 1957.

The House met in the Assembly Hall, Vidhana Soudha, Bangalore, at Thirty Minutes past Eight of the Clock.

MR. SPEAKER (SRI S. R. KANTHI, B.A., LL.B.) in the Chair.

QUESTIONS AND ANSWERS

Recommendation for opening Dispensaries in Kanakapura and Channapatna Taluks.

Q.—206. **Sri S. KARIYAPPA** (Virupakshapura).—

Will the Government be pleased to state :—

(*a*) whether they have received recommendations for opening dispensaries at Kolliganahalli and Hunasanahalli in Kanakapura Taluk and Kodambally and Sogal in Channapatna Taluk ;

(*b*) whether they propose to make provision in the next budget for opening dispensaries in these places ?

A.—**Sri A. B. SHETTY** (Minister for Public Health).—

(*a*) Yes, only in respect of Kodambally and Sogal in Channapatna Taluk.

(*b*) No.

ಶ್ರೀ ಎಸ್. ಕರಿಯಪ್ಪ.—ಈ ಕೋಡಂಬಳ್ಳಿ ಗ್ರಾಮದಲ್ಲಿ ಲೋಕಲ್ ಫಂಡಿನಿಂದ ಒಂದು ಡಿಸ್ಪೆನ್ಸರಿಯನ್ನು ಏರ್ಪಡಿಸುವುದಕ್ಕೆ ಶಿಫಾರಸುಗಳು ಏನಾದರೂ ಬಂದಿವೆಯೇ ?

ಶ್ರೀ ಎ. ಬಿ. ಶೆಟ್ಟಿ.—ಕೋಡಂಬಳ್ಳಿ ಮತ್ತು ಸೋಗಾಲ ಗ್ರಾಮಗಳಲ್ಲಿಯ ಜನರ ಬೇಡಿಕೆಯು ಬಂದಿರುವದು. ಒಂದು ಗ್ರಾಮಕ್ಕೆ ಮಾತ್ರ ಸಲಹೆ ಕೊಟ್ಟಿಲ್ಲ. ಮಾನ್ಯ ಸದಸ್ಯರು ಸಾತನೂರು ಗ್ರಾಮದಲ್ಲಿ ಡಿಸ್ಪೆನ್ಸರಿ ಪ್ರಾರಂಭ ಮಾಡಬೇಕೆಂದು ಹೇಳಿದರು. ಆದುದರಿಂದ 19ನೇ ಜನವರಿ 1956 ರಿಂದ ಸಾತನೂರು ಗ್ರಾಮದಲ್ಲಿ ಒಂದು ಡಿಸ್ಪೆನ್ಸರಿಯು ಪ್ರಾರಂಭವಾಗಿದೆ.

ಶ್ರೀ ಎಸ್. ಕರಿಯಪ್ಪ.—ಕೋಡಂಬಳ್ಳಿ ಮತ್ತು ಸೋಗಾಲ ಗ್ರಾಮಗಳಲ್ಲಿ ಡಿಸ್ಪೆನ್ಸರಿಯು ಅವಶ್ಯಕವಾಗಿದೆ ಅಥವಾ ಇಲ್ಲ ಎಂಬುದು ಕಂಡು ಬಂದಿದೆಯೇ?

ಶ್ರೀ ಎ. ಬಿ. ಶೆಟ್ಟಿ.—ಕೋಡಂಬಳ್ಳಿಯಲ್ಲಿ ಇಲ್ಲ.

ಶ್ರೀ ಎಸ್. ಕರಿಯಪ್ಪ.—ಚನ್ನಪಟ್ಟಣ ತಾಲ್ಲೂಕಿನಲ್ಲಿ ಒಂದೇ ಸ್ಥಳದಲ್ಲಿ ಅಂದರೆ ಕೋಡಂಬಳ್ಳಿ ಗ್ರಾಮದಲ್ಲಿ ಡಿಸ್ಪೆನ್ಸರಿಯು ಇರಬೇಕಾದುದು ಅವಶ್ಯಕವಲ್ಲವೇ ?

ಶ್ರೀ ಎ. ಬಿ. ಶೆಟ್ಟಿ.—ಆ ಊರಿನಲ್ಲಿಯ ಜನರು ವಂತಿಕೆಯನ್ನು ಕೊಟ್ಟಿಲ್ಲ.

ಶ್ರೀ ಎಸ್. ಕರಿಯಪ್ಪ.—ಚನ್ನಪಟ್ಟಣ ತಾಲ್ಲೂಕಿನಲ್ಲಿ ಲೋಕಲ್ ಫಂಡಿನಿಂದ ನಡೆಯತಕ್ಕಂಥ ಡಿಸ್ಪೆನ್ಸರಿಗಳು ಎಷ್ಟು ಇವೆ ?

Mr. SPEAKER.—It is outside the scope of the qnestion.

ಶ್ರೀ ಎಸ್. ಕರಿಯಪ್ಪ.—ಚನ್ನಪಟ್ಟಣದಂಥ ದೊಡ್ಡ ತಾಲ್ಲೂಕಿಗೆ ಒಂದೇ ಡಿಸ್ಪೆನ್ಸರಿಯು ಆಗುವದಿಲ್ಲವೇ ?

Sri A. B. SHETTY.—Notice please.

ಶ್ರೀ ಎಸ್. ಕರಿಯಪ್ಪ.—ಚನ್ನಪಟ್ಟಣವು ದೊಡ್ಡ ತಾಲ್ಲೂಕ ಆಗಿರುವದರಿಂದ ಒಂದು ಡಿಸ್ಪೆನ್ಸರಿಯು ಇರತಕ್ಕದ್ದು ಅವಶ್ಯಕ. ಆದುದರಿಂದ ಒಂದು ಡಿಸ್ಪೆನ್ಸರಿಯನ್ನು ಮಂಜೂರು ಮಾಡುವಿರಾ ?

ಅಧ್ಯಕ್ಷರು.—ವಂತಿಕೆಯನ್ನು ಕೊಟ್ಟಿಲ್ಲ ಎಂದು ಉತ್ತರ ಹೇಳಿದ್ದಾರೆ.

ಶ್ರೀ ಎಸ್. ಕರಿಯಪ್ಪ.—ಈಗ ವಂತಿಕೆಯನ್ನು ಕೊಡುತ್ತೇವೆಂದು ಜನರು ಬರೆದು ಕೊಟ್ಟಿದ್ದಾರೆ.

ಶ್ರೀ ಎ. ಬಿ. ಶೆಟ್ಟಿ.—ಮಾನ್ಯ ಸದಸ್ಯರು ಸ್ವತಃ ಸಾತನೂರಿನಲ್ಲಿ ಒಂದು ಡಿಸ್ಪೆನ್ಸರಿ ಪ್ರಾರಂಭ ಮಾಡಿದರೆ ಸಾಕು ಎಂದು ತಿಳಿಸಿದ್ದಾರೆ.

ಶ್ರೀ ಎಸ್. ಕರಿಯಪ್ಪ.—ಅಲ್ಲಿಯ ಜನರು ಈಗ ನಾವು ದುಡ್ಡು ಕೊಡುತ್ತೇವೆ ಡಿಸ್ಪೆನ್ಸರಿ ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದಾರೆ. ಸಾತನೂರು ಇದು ಕನಕಾಪುರ ತಾಲ್ಲೂಕಿನಲ್ಲಿ ಇವೆ. ಆದರೆ ಕೋಡಂಬಳ್ಳಿಯು ಚನ್ನಪಟ್ಟಣ ತಾಲ್ಲೂಕಿನಲ್ಲಿ ಇರುವುದರಿಂದ ಕೇಳುತ್ತೇವೆ. ಹಣ ಕೊಡಲು ತಯಾರಿದ್ದಾರೆ.

ಅಧ್ಯಕ್ಷರು.—ಮುಚ್ಚಳಿಕೆ ಬರೆದು ಕೊಟ್ಟಿದ್ದಾರೆಯೆ?

ಶ್ರೀ ಎಸ್. ಕರಿಯಪ್ಪ.—ಗ್ರಾಮಸ್ಥರು ಬರೆದು ಕೊಟ್ಟಿದ್ದಾರೆ. ದೊಡ್ಡ ಗ್ರಾಮಕ್ಕೆ ಡೆಸ್ಪೆನ್ಸರಿ ಕೊಡುವದು ನ್ಯಾಯವಾಗುವುದಿಲ್ಲವೇ ?

ಶ್ರೀ ಎ. ಬಿ. ಶೆಟ್ಟಿ.—ವಂತಿಕೆ ಕೊಟ್ಟಿದ್ದರೆ ಇದರ ಸಂಬಂಧವಾಗಿ ವಿಚಾರ ಮಾಡಬಹುದು ?